ಮೂಲ ದಾವಾ ನಂಃ 144/2018

ಪಿ ಡಬ್ಲುಃ 1

ಸಾಕ್ಷಿಯನ್ನು ದಿನಾಂಕಃ **31-03-2023** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ ಶ್ರೀ ಜಿ.ವಿ.ಭಟ್ಟ ವಕೀಲರಿಂದ**

ನಾನು ನನ್ನ ಮುಖ್ಯ ವಿಚಾರಣೆಯ ಕುರಿತು ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿ ಬರೆದ ವಿಷಯ ನಾನೇ ಹೇಳಿ ಬರೆಸಿದ್ದು, ಅವು ಸತ್ಯವಾಗಿರುತ್ತದೆ.

ನಾನು ನ್ಯಾಯಾಲಯದ ಮುಂದೆ ದಾವೆಗೆ ಸಂಬಂದಿಸಿದಂತೆ ದಾಖಲೆಗಳನ್ನು ಹಾಜರುಪಡಿಸುತ್ತಿದ್ದೇನೆ.
ದಾವಾ ಸ್ಥಳಕ್ಕೆ ಸಂಬಂದದಿಸಿದ 4 ಆರ್.ಟಿ.ಸಿ ಗಳನ್ನು ಹಾಜರುಪಡಿಸಿದ್ದು ಅವುಗಳಲ್ಲಿ ಸರ್ವೇ ನಂಬರ್ 240 ಹಿಸ್ಸಾ 1 ನ್ನು ನಿಪಿ 1 ಎಂದು, ಸರ್ವೇ ನಂಬರ್ 242 ಹಿಸ್ಸಾ 1 ನ್ನು ನಿಪಿ 2 ಎಂದು, ಸರ್ವೇ ನಂಬರ್ 242 ಹಿಸ್ಸಾ 2 ನ್ನು ನಿಪಿ 3 ಎಂದು, ಸರ್ವೇ ನಂಬರ್ 240 ಹಿಸ್ಸಾ 2 ನ್ನು ನಿಪಿ 4 ಎಂದು, ದಾವಾ ಸ್ವತ್ತಿಗೆ ಸಂಬಂದಿಸಿದ ಗ್ರಾಮ ನಕಾಶೆಯ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ 5 ಎಂದು , ಮತ್ತು ಸರ್ವೇ ನಂಬರ್ 242 1 ಪೋಟ್ ಹಿಸ್ಸಾ ನಕಾಶೆಯ ದೃಢೀಕೃತ ಪ್ರತಿಯನ್ನು ಕ್ರಮವಾಗಿ ನಿಪಿ 6 ಮತ್ತು 7 ಎಂದು, ಕ್ರಯ ಪತ್ರದ ದೃಢೀಕೃತ ಪ್ರತಿಯನ್ನು ನಿಪಿ 8 ಎಂದು, ಮತ್ತು ದಾವಾ ರಸ್ತೆಗೆ ಸಂಬಂದಿಸಿದಂತೆ 8 ಪೋಟೋಗಳನ್ನು ಮತ್ತು ಸಿಡಿಯನ್ನು ಸಲ್ಲಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ 9 ರಿಂದ 17 ಎಂದು , 3 ನೇ ಪ್ರತಿವಾದಿಯ ತಂದೆಯು 4 ನೇ ಪ್ರತಿವಾದಿಯ ತಾಯಿಗೆ ಮಾಡಿಕೊಟ್ಟ ಕ್ರಯಪತ್ರದ ದೃಢೀಕೃತ ಪ್ರತಿಯನ್ನು ನಿಪಿ 18 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ವಕೀಲರು ಸಮಯ ಕೇಳಿದ್ದು ಸಮಯ ನೀಡಲಾಯಿತು.)
(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

Sd/-

ಹೆಚ್ಚುವರಿ ಪ್ರ ದ ನ್ಯಾದಂ ಹೊನ್ನಾವರ.